**Akashvani : Bangalore**
**National Bulletin In Kannada**
**17.02.2025 / 13.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**17.02.2025 / 13.10 hrs**

**<><*<><>*><>**

ಮುಖ್ಯಾಂಶಗಳು

೧. ದೆಹಲಿ ಹಾಗೂ ಉತ್ತರಭಾರತದ ಹಲವು ಭಾಗಗಳಲ್ಲಿ ಭೂಕಂಪನ ; ಪ್ರಧಾನಿಯವರಿಂದ ಮುನ್ನೆಚ್ಚರಿಕೆ ವಹಿಸಲು ಸಲಹೆ

೨. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮತ್ತೊಂದು ಮೈಲಿಗಲ್ಲು ; ವಿಶ್ವದ ಅತಿದೊಡ್ಡ ೧೦ ಟನ್ ರಾಕೆಟ್ ಇಂಧನ ಮಿಶ್ರಣ ತಂತ್ರಜ್ಞಾನ ಅಭಿವೃದ್ಧಿ

೩. ನೂತನ ಮುಖ್ಯ ಚುನಾವಣಾ ಆಯುಕ್ತರ ನೇಮಕಕ್ಕೆ ಇಂದು ಪ್ರಧಾನಿ ನೇತೃತ್ವದ ಮೂರು ಸದಸ್ಯರ ಸಮಿತಿ ಸಭೆ

೪. ಮಹಿಳಾ ಪ್ರಿಮಿಯರ್ ಲೀಗ್ ಟಿ-೨೦ ಕ್ರಿಕೆಟ್ ; ವಡೋದರದಲ್ಲಿಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು-ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿ

**<><*<><>*><>**

ನವದೆಹಲಿ ಮತ್ತು ಉತ್ತರ ಭಾರತದ ಹಲವು ಭಾಗಗಳಲ್ಲಿ ಇಂದು ಬೆಳಗಿನ ಜಾವ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ ಸುಮಾರು ೪ ತೀವ್ರತೆ ದಾಖಲಾಗಿದೆ. ರಾಷ್ಟ್ರೀಯ ಭೂಕಂಪ ಶಾಸ್ತ್ರ ಕೇಂದ್ರದ ಮಾಹಿತಿ ಪ್ರಕಾರ, ಭೂಕಂಪದ ಕೇಂದ್ರ ಬಿಂದು ದೆಹಲಿ ಬಳಿ ೫ ಕಿಲೋಮೀಟರ್ ಆಳದಲ್ಲಿದೆ. ಯಾವುದೇ ಆಸ್ತಿಪಾಸ್ತಿ ಅಥವಾ ಜೀವ ಹಾನಿಯ ಕುರಿತು ವರದಿಯಾಗಿಲ್ಲ. ಭೂಕಂಪದ ಕುರಿತು ಸಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ದೆಹಲಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಜನರು ಎಲ್ಲ ಅಗತ್ಯ ಮುನ್ನೆಚ್ಚರಿಕೆ ವಹಿಸಿ, ಧೃತಿಗೆಡದಂತೆ ಸೂಚಿಸಿದ್ದಾರೆ. ಅಧಿಕಾರಿಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಅಗತ್ಯಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ಭರವಸೆ ನೀಡಿದ್ದಾರೆ.

**<><*<><>*><>**

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದು, ವಿಶ್ವದ ಅತಿದೊಡ್ಡ ೧೦ ಟನ್ ರಾಕೆಟ್ ಇಂಧನ ಮಿಶ್ರಣ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದೆ. ಇಸ್ರೋದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ಹಾಗೂ ಬೆಂಗಳೂರಿನ ಕೇಂದ್ರ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ ಸಹಯೋಗದಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಈ ಇಂಧನ ಮಿಶ್ರಣ ಘಟಕ ೧೫೦ ಟನ್

ತೂಕ, ೮.೭ ಮೀಟರ್ ಎತ್ತರ, ೫.೪ ಮೀಟರ್ ಉದ್ದ ಹಾಗೂ ೩.೩ ಮೀಟರ್ ಅಗಲವಿದ್ದು, ಇದನ್ನು ಸಾಲಿಡ್ ರಾಕೆಟ್ ಮೋಟಾರ್‌ಗಳಿಗಾಗಿ ಅಭಿವೃದ್ಧಿಪಡಿಸಲಾಗಿದೆ. ರಾಕೆಟ್ ಉಡಾವಣೆಗೆ ಅಗತ್ಯವಾದ ಘನ ಇಂಧನಗಳ ನಿಖರ ಮತ್ತು ಸುರಕ್ಷಿತ ಮಿಶ್ರಣವನ್ನು ಖಚಿಪಡಿಸುತ್ತದೆ. ಈ ಯಶಸ್ಸು ಬಾಹ್ಯಾಕಾಶದಲ್ಲಿ ಆತ್ಮನಿರ್ಭರ ಭಾರತ ಉಪಕ್ರಮದಡಿ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಭಾರತದ ಸ್ವಾವಲಂಬನೆಯ ಸಂಕೇತವಾಗಿದೆ ಎಂದು ಇಸ್ರೋ ತಿಳಿಸಿದೆ. ಈ ವ್ಯವಸ್ಥೆ ಘನ ಮೋಟಾರು ಉತ್ಪಾದನೆಯಲ್ಲಿ ಸುಧಾರಿತ ಉತ್ಪಾದಕತೆ, ಗುಣಮಟ್ಟ ಮತ್ತು ಸುರಕ್ಷತೆಯನ್ನು ಖಚಿತಪಡಿಸುತ್ತದೆ. ಕಳೆದ ವಾರ ಈ ಘಟಕವನ್ನು ಇಸ್ರೋಗೆ ಹಸ್ತಾಂತರಿಸಲಾಗಿದೆ.

<><*<><>*><>

ಹಾಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನಾಳೆ ನಿವೃತ್ತರಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಉತ್ತರಾಧಿಕಾರಿಯಾಗಿ ನೂತನ ಮುಖ್ಯ ಚುನಾವಣಾಧಿಕಾರಿ ಆಯ್ಕೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ೩ ಸದಸ್ಯರ ಸಮಿತಿ ಇಂದು ಸಭೆ ಸೇರಲಿದೆ. ರಾಜೀವ್ ಕುಮಾರ್ ಅವರಿಗೆ ಇಂದು ೬೫ ವರ್ಷ ತುಂಬುತ್ತಿದ್ದು, ಅಧಿಕಾರ ತ್ಯಾಜಿಸಲಿದ್ದಾರೆ. ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಪ್ರಧಾನಮಂತ್ರಿ ನಾಮ ನಿರ್ದೇಶಿತ ಕೇಂದ್ರ ಸಚಿವರೊಬ್ಬರು ಆಯ್ಕೆ ಸಮಿತಿಯ ಭಾಗವಾಗಿರಲಿದ್ದಾರೆ. ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಕೂಡ ಸಭೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಡಿಸೆಂಬರ್ ೨೦೨೩ರಲ್ಲಿ ಜಾರಿಗೆ ಬಂದಿರುವ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ ಕಾಯ್ದೆ ೨೦೨೩ರ ಅಡಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರ ಮೊದಲ ನೇಮಕಾತಿ ಇದಾಗಿದೆ. ಕಳೆದ ೨೦೨೪ರ ಮಾರ್ಚ್‌ನಲ್ಲಿ ಇದರಡಿಯಲ್ಲಿ ಎಸ್.ಎಸ್. ಸಂಧು ಹಾಗೂ ಜ್ಞಾನೇಶ್‌ಕುಮಾರ್ ಅವರನ್ನು ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಗಿದೆ.  ಈ ನೇಮಕಾತಿ ಪ್ರಕ್ರಿಯೆ ಹಾಗೂ ಅದರಲ್ಲಿ ಮುಖ್ಯ ನ್ಯಾಯಮೂರ್ತಿಯವರನ್ನು ಹೊರತುಪಡಿಸಿರುವ ಕುರಿತಂತೆ ಸುಪ್ರೀಂಕೋರ್ಟ್‌ನಲ್ಲಿ ಹಲವು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಹೂಡಲಾಗಿದ್ದು, ಈ ಅರ್ಜಿಗಳ ವಿಚಾರಣೆಯನ್ನು ಇದೇ ೧೯ರಂದು ಸರ್ವೋಚ್ಚ ನ್ಯಾಯಾಲಯ ಕೈಗೆತ್ತಿಕೊಂಡಿದೆ.

<><*<><>*><>

ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಸಿದ್ಧತೆ, ಒತ್ತಡ ನಿರ್ವಹಣೆ ಮತ್ತು ವೈಯಕ್ತಿಕ ಬೆಳವಣಿಗೆ ಕುರಿತಂತೆ ಅರಿವು ಮೂಡಿಸಲು ಪ್ರಧಾನಿ ನರೇಂದ್ರ ಮೋದಿ ನಡೆಸಿಕೊಡುವ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮ ಈ ಬಾರಿ ೮ ಸಂಚಿಕೆಗಳಲ್ಲಿ ಮೂಡಿ ಬರುತ್ತಿದೆ. ಪ್ರತಿ ಸಂಚಿಕೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಿದ್ದಾರೆ.  ಇಂದಿನ ೭ನೇ ಸಂಚಿಕೆಯಲ್ಲಿ ಖ್ಯಾತ ಬಾಕ್ಸರ್ ಎಂ.ಸಿ. ಮೆರಿಕಾಮ್, ಪ್ಯಾರಾ ಅಥ್ಲಿಟ್ ಅವನಿ ಲೇಖರಾ ಹಾಗೂ ಪ್ಯಾರಾ ಬಾಡ್ಮಿಂಟನ್ ಪಟು ಸುಹಾಸ್ ಎಲ್. ಯತಿರಾಜ್, ವಿದ್ಯಾರ್ಥಿಗಳೊಂದಿಗೆ ಗುರಿ ಸಾಧನೆ, ಧೃಡತೆ, ಶಿಸ್ತು ಪಾಲನೆ ಮೂಲಕ ಒತ್ತಡ ನಿರ್ವಹಣೆ ಕುರಿತಂತೆ ಉಪಯುಕ್ತ ಸಲಹೆ ನೀಡಿದರು. ವಿದ್ಯಾರ್ಥಿಗಳ ಹಲವು

ಸಂದೇಹಗಳಿಗೆ ತಮ್ಮ ಅನುಭವದ ಆಧಾರದ ಮೇಲೆ ಉತ್ತರ ನೀಡಿದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಮೆರಿಕಾಮ್ ಎದುರಾಗುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಲು ಕೇವಲ ಬಾಹ್ಯವಾಗಿ ಅಲ್ಲದೆ, ಆಂತರಿಕವಾಗಿ ಸದೃಢವಾಗಿರಬೇಕು ಎಂದರು.

ಧ್ವನಿ : ಮೆರಿಕಾಮ್ (೧೯ ಸೆಕೆಂಡ್ಸ್)

<><*<><>*><>

ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ - ಎನ್‌ಟಿಪಿಸಿ ಎಲೆಕ್ಟ್ರಾನ್ ರಸಪ್ರಶ್ನೆಯ ಪ್ರಾದೇಶಿಕ ಸುತ್ತಿನಲ್ಲಿ ಐಐಟಿ ಮದ್ರಾಸ್ ವಿಜೇತರಾಗಿ ಹೊರಹೊಮ್ಮಿದೆ. ಚೆನ್ನೈನ ಎಂಎಂಎ ಸಭಾಂಗಣದಲ್ಲಿ ಇಂದು ನಡೆದ ಎನ್‌ಟಿಪಿಸಿ ಎಲೆಕ್ಟ್ರಾನ್ ರಸಪ್ರಶ್ನೆಯ ದಕ್ಷಿಣ ಭಾರತದ ಪ್ರಾದೇಶಿಕ ಸುತ್ತಿನಲ್ಲಿ ಐಐಟಿ ಮದ್ರಾಸ್‌ನ ಎರಡು ತಂಡಗಳು ಮೊದಲ ಎರಡು ಸ್ಥಾನಗಳನ್ನು ಗಳಿಸಿದವು.

ಈ ಕುರಿತು ಒಂದು ವರದಿ : ಅಶೋಕ ಬಿ.ಎ.

ಎನ್‌ಟಿಪಿಸಿ ಎಲೆಕ್ಟ್ರಾನ್ ರಸಪ್ರಶ್ನೆಯಲ್ಲಿ ೧೦೫ ತಂಡಗಳು ಭಾಗವಹಿಸಿದ್ದವು. ಪ್ರಾಥಮಿಕ ಸುತ್ತಿನಲ್ಲಿ ಅರ್ಹತೆ ಪಡೆದ ಆರು ತಂಡಗಳು ಅಂತಿಮ ಹಂತವನ್ನು ಪೂರ್ಣಗೊಳಿಸಿದವು. ಅಗ್ರ ಎರಡು ತಂಡಗಳು ನವದೆಹಲಿಯಲ್ಲಿ ಆಯೋಜಿಸಲಾಗುವ ರಾಷ್ಟ್ರೀಯ ಸುತ್ತಿಗೆ ಮುನ್ನಡೆಯಲಿವೆ. ೩೦ ವರ್ಷಗಳಿಗೂ ಅಧಿಕ ಅನುಭವವಿರುವ ಕೆ.ಎಂ. ಪ್ರಶಾಂತ್ ರಸಪ್ರಶ್ನೆಯನ್ನು ನಡೆಸಿಕೊಟ್ಟರು. ವಿಜೇತ ತಂಡಕ್ಕೆ ೩೦ ಸಾವಿರ ರೂಪಾಯಿ ನಗದು ಬಹುಮಾನ ನೀಡಲಾಯಿತು. ೨ನೇ ಸ್ಥಾನ ಪಡೆದ ತಂಡಕ್ಕೆ ೨೦ ಸಾವಿರ ಹಾಗೂ ೩ನೇ ಸ್ಥಾನ ಪಡೆದ ತಂಡಗಳಿಗೆ ೧೦ ಸಾವಿರ ರೂಪಾಯಿ ನೀಡಲಾಯಿತು. ಉಳಿದ ಮೂರು ತಂಡಗಳಿಗೆ ತಲಾ ೪ ಸಾವಿರ ರೂಪಾಯಿ ವಿತರಿಸಲಾಯಿತು. ೨೦೦೪ ರಿಂದ ಆಯೋಜಿಸಲಾಗುತ್ತಿರುವ ಎನ್‌ಟಿಪಿಸಿ ಎಲೆಕ್ಟ್ರಾನ್ ರಸಪ್ರಶ್ನೆ ಕಾರ್ಯಕ್ರಮ ಬೌದ್ಧಿಕ ಮಟ್ಟವನ್ನು ಪ್ರದರ್ಶಿಸಲು ಒಂದು ಉತ್ತಮ ವೇದಿಕೆಯಾಗಿದೆ. ಎನ್‌ಟಿಪಿಸಿಯ ಹಿರಿಯ ಅಧಿಕಾರಿಗಳಾದ ಜಯನಾರಾಯಣನ್ ಮತ್ತು ಎಸ್.ಎನ್. ಪಾಣಿಗ್ರಾಹಿ ಉಪಸ್ಥಿತರಿದ್ದರು.

<><*<><>*><>

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಗಾಜಾದಲ್ಲಿ ನೆಲೆಸಿರುವ ಜನರಿಗೆ ಪುನರ್ವಸತಿ ಕಲ್ಪಿಸುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಯೋಜನೆಯ ಕುರಿತಂತೆ ಚಿಂತನೆ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ. ಜೆರುಸಲೆಮ್‌ನಲ್ಲಿ ಮಧ್ಯಪ್ರಾಚ್ಯ ಭೇಟಿಯಲ್ಲಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ನೆತನ್ಯಾಹು ಈ ಯೋಜನೆ ಕುರಿತು ಚರ್ಚಿಸಿದರು. ಗಾಜಾದಲ್ಲಿ ಇಸ್ರೇಲ್‌ನ ಯುದ್ಧದ ಗುರಿಯ ಕುರಿತು ಒಮ್ಮತ ವ್ಯಕ್ತಪಡಿಸಿದ ರುಬಿಯೊ, ಹಮಾಸ್ ಸಂಘಟನೆಯನ್ನು ನಿರ್ಮೂಲನೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು. ಅಮೆರಿಕದ ನೇತೃತ್ವದಲ್ಲಿ ಗಾಜಾ ಪುನರಾಭಿವೃದ್ಧಿ ಕುರಿತ ಅಧ್ಯಕ್ಷ ಟ್ರಂಪ್ ಅವರ ಪ್ರಸ್ತಾಪವನ್ನು ವಿರೋಧಿಸಿರುವ ಸೌದಿ ಅರೇಬಿಯಾ ಮತ್ತು ಯುಎಇ ರಾಷ್ಟ್ರಗಳಿಗೆ ರೂಬಿಯೊ ಭೇಟಿ ನೀಡಲಿದ್ದಾರೆ.

ತಾವು ಮತ್ತು ಅಧ್ಯಕ್ಷ ಟ್ರಂಪ್ ಗಾಜಾ ಕುರಿತಂತೆ ಹೊಂದಿರುವ ತಂತ್ರಗಳು ಹೋಲಿಕೆಯಾಗುತ್ತವೆ ಎಂದು ನೆತನ್ಯಾಹು ಹೇಳಿದ್ದಾರೆ. ಹಮಾಸ್ ಉಳಿಸಿಕೊಂಡಿರುವ ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದರೆ, ಋಣಾತ್ಮಕ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದಿದ್ದಾರೆ. ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದು ಮತ್ತು ಇಸ್ರೇಲಿ ಪಡೆಗಳನ್ನು ಹಿಂತೆಗೆದುಕೊಳ್ಳುವುದು ಸೇರಿದಂತೆ ಕದನ ವಿರಾಮದ ಎರಡನೇ ಹಂತದ ಕುರಿತು ಮಾತುಕತೆಗಳು ಇನ್ನೂ ಪ್ರಾರಂಭವಾಗಿಲ್ಲ. ೧೯ ಇಸ್ರೇಲಿ ಸೈನಿಕರನ್ನು ಬಿಡುಗಡೆ ಮಾಡುವ ಗುರಿಯನ್ನು ಹೊಂದಿರುವ ಮಾತುಕತೆ ಶೀಘ್ರದಲ್ಲೇ ಪ್ರಾರಂಭವಾಗಲಿದೆ ಎಂದು ಟ್ರಂಪ್ ಅವರ ರಾಯಭಾರಿ ಸ್ಟೀವ್ ವಿಟ್ಕಾಫ್ ಹೇಳಿದ್ದಾರೆ.

<><*<><>*><>

ಉಕ್ರೇನ್ ಸಂಘರ್ಷ ಕುರಿತಂತೆ ಚರ್ಚಿಸಲು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯಲ್ ಮ್ಯಾಕ್ರನ್ ನಾಳೆ ಬ್ರಿಟನ್ ಪ್ರಧಾನಿ ಸೇರಿದಂತೆ ಯುರೋಪ್ ನಾಯಕರ ಆತಿಥ್ಯ ವಹಿಸಲಿದ್ದಾರೆ. ಆದರೆ ಉಕ್ರೇನ್ ಸಂಘರ್ಷ ಕೊನೆಗೊಳಿಸುವ ಬಗ್ಗೆ ಶೃಂಗಸಭೆಯಲ್ಲಿ ಯೂರೋಪ್ ಯಾವುದೇ ಪಾತ್ರವನ್ನು ಹೊಂದಿರುವುದಿಲ್ಲ ಎಂದು ಅಮೆರಿಕಾ ಸ್ಪಷ್ಟಪಡಿಸಿದೆ.

ಸಮಾಲೋಚನೆಗೆ ಕರೆ ನೀಡಿರುವ ಮ್ಯಾಕ್ರನ್ ಅವರು ಉಕ್ರೇನ್ ಕುರಿತು ಬದಲಾಗಿರುವ ಅಮೆರಿಕದ ನೀತಿ ಹಾಗೂ ಯೂರೋಪ್ ಖಂಡದ ಭದ್ರತೆಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚಿಸಲಾಗುವುದು ಎಂದು ಮ್ಯಾಕ್ರನ್ ತಿಳಿಸಿದ್ದಾರೆ.

ಜರ್ಮನ್ ಚಾನ್ಸಲರ್ ಓಲಾಫ್ ಸ್ಕಾಲ್ಜ್, ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್, ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟೆ, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಮತ್ತು ಐರೋಪ್ಯ ಒಕ್ಕೂಟದ ಉರ್ಸುಲಾ ವೊನ್ ಡೆರ್ ಲೆಯನ್ ಹಾಗೂ ಆಂಟೋಲಿಯೋ ಕೋಸ್ಟಾ ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

<><*<><>*><>

ಆಫ್ರಿಕಾದ ಪಶ್ಚಿಮ ಮಾಲಿಯಲ್ಲಿ ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿದ್ದ ಚಿನ್ನದ ಗಣಿ ಕುಸಿದು ಕನಿಷ್ಠ ೪೮ ಜನರು ಸಾವನ್ನಪ್ಪಿದ್ದು, ಅನೇಕರು ಗಾಯಗೊಂಡಿದ್ದಾರೆ. ಈ ವರ್ಷ ಮಾಲಿಯಲ್ಲಿ ಸಂಭವಿಸಿದ ಎರಡನೇ ಗಣಿ ಅಪಘಾತ ಇದಾಗಿದೆ.

<><*<><>*><>

ವಡೋದರಾದ ಕೋಟಂಬಿ ಕ್ರೀಡಾಂಗಣದಲ್ಲಿ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಇಂದು ಡೆಲ್ಲಿ ಕ್ಯಾಪಿಟಲ್ಸ್ ತಂಡ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ.

<><*<><>*><>

ಭುವನೇಶ್ವರದಲ್ಲಿ ನಡೆದ ಎಫ್‌ಐಎಚ್ ಪ್ರೋ ಹಾಕಿ ಲೀಗ್ ಪಂದ್ಯದಲ್ಲಿ ಭಾರತದ ಪುರುಷರ ತಂಡ ಸ್ಪೇನ್ ತಂಡದ ವಿರುದ್ಧ ೨-೦ ಗೋಲುಗಳ ಅಂತರದಲ್ಲಿ ಜಯ ಸಾಧಿಸಿದೆ. ಭಾರತದ ಪರ ದಿಲ್‌ಪ್ರೀತ್ ಹಾಗೂ ಮನ್‌ದೀಪ್ ಗೋಲು ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದಕ್ಕೂ ಮುನ್ನ ನಡೆದ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಭಾರತದ ವನಿತೆಯರ ತಂಡ ಇಂಗ್ಲೆಂಡ್ ವಿರುದ್ಧ ಸೋಲನುಭವಿಸಿದೆ. ಪಂದ್ಯದ ನಿಗದಿತ ಸಮಯದಲ್ಲಿ ಉಭಯ ತಂಡಗಳು ಸಮಬಲ ಸಾಧಿಸಿದ ಹಿನ್ನೆಲೆಯಲ್ಲಿ ನಡೆದ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಇಂಗ್ಲೆಂಡ್ ತಂಡ ಜಯಗಳಿಸಿದೆ. ನಾಳೆ ನಡೆಯುವ ಪಂದ್ಯದಲ್ಲಿ ಭಾರತ ಹಾಗೂ ಸ್ಪೇನ್‌ನ ವನಿತೆಯರ ತಂಡ ಮುಖಾಮುಖಿಯಾಗಲಿವೆ.

<><*<><>*><>

ಪ್ರಸಕ್ತ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಟೂರ್ನಿ ಮಾರ್ಚ್ ೨೨ ರಂದು ಆರಂಭವಾಗಲಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಬಿಸಿಸಿಐ ಪ್ರಕಟಿಸಿದೆ. ಇದು ಐಪಿಎಲ್‌ನ ೧೭ನೇ ಆವೃತ್ತಿಯಾಗಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>